# ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಬಸವನಬಾಗೇವಾಡಿ ಜಿಲ್ಲಾ: ವಿಜಾಪೂರ

ಸಂಖ್ಯೆ: ಎ3/ಎಲ್.ಕೆ.ಜಿ./ಯು.ಕೆ.ಜಿ/ಪ್ರಾ/2012-13

ದಿನಾಂಕ: 26-11-2012

ಕರ್ನಾಟಕ ಸರಕಾರ

ನಮೂನೆ-2

(ನಿಯಮ-3ಉಪನಿಯಮ 5(ಬಿ)

ಕೂಡಲ ಸಂಗಮ ಅಭಿವೃದ್ಧಿ ಮಂಡಳ ಕೂಡಲ ಸಂಗಮ ತಾ: ಹುನಗುಂದ ಜಿಲ್ಲಾ: ಬಾಗಲಕೋಟ ಇದರಡಿಯಲ್ಲಿ ಪೂರ್ವ ಪ್ರಾಥಮಿಕ ಶಾಲೆ ಪ್ರಾರಂಭಿಸಲು ಅನುಮತಿ ನೀಡುವ ಕುರಿತು ಇವರಿಗೆ ಗೌರ್ವನಿಂಗ್ ಕೌನ್ಸಿಲನ್ನು ಕರ್ನಾಟಕ ಶಿಕ್ಷಣ ಕಾಯ್ದೆ 1983 (ಕರ್ನಾಟಕ ಆಯಕ್ಟ1-1995 ಸೆಕ್ಷನ್ 31 ಮತ್ತು 32 ರಂತೆ ಶ್ರೀ ಬಸವೇಶ್ವರ ದೇವಾಲಯ ಕನ್ನಡ ಮಾಧ್ಯಮ ಪೂರ್ವ ಪ್ರಾಥಮಿಕ ಶಾಲೆ ಬಬಾಗೇವಾಡಿ ತಾ:ಬಬಾಗೇವಾಡಿ ನೊಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

| | | |
|---|---|---|
| 1 | ಕ್ರಮ ಸಂಖ್ಯೆ | 2/2012-13 |
| 2 | ಶಾಲೆಯ ಹೆಸರು ಮತ್ತು ವಿಳಾಸ | ಶ್ರೀ ಬಸವೇಶ್ವರ ದೇವಾಲಯ ಪೂರ್ವ ಪ್ರಾಥಮಿಕ ಶಾಲೆ ಬಬಾಗೇವಾಡಿ ತಾ:ಬಸವನಬಾಗೇವಾಡಿ |
| 3 | ಅನುಮತಿ ನೀಡಿದ ತರಗತಿಗಳು | 2013-14 ನೇ ಸಾಲಿನಿಂದ ಎಲ್.ಕೆ.ಜಿ. 2014-15 ನೇ ಸಾಲಿನಿಂದ ಯು.ಕೆ.ಜಿ |
| 4 | ಪ್ರಾರಂಭಿಸಬೇಕಾದ ಶೈಕ್ಷಣಿಕ ವರ್ಷ | 2013-14 ಸಾಲಿನಿಂದ ಎಲ್.ಕೆ.ಜಿ. |
| 5 | ಅನುಮತಿ ನೀಡಿದ ಮಾಧ್ಯಮ | ಕನ್ನಡ ಮಾಧ್ಯಮ |
| 6 | ಶುಲ್ಕ ಪಾವತಿ ಮಾಡಿರುವರು | ರೂ:2000/- ಡಿ ಡಿ ಸಂಖ್ಯೆ: 390322 ದಿನಾಂಕ: 22/10/2012 |

ಸದರಿ ಶಿಕ್ಷಣ ಸಂಸ್ಥೆಯನ್ನು ಕ್ರ ಸಂ: 2 ವದಯಾಲ್ಯೂಮ್ ಸಂಖ್ಯೆ: 1 ರಲ್ಲಿ ಈ ಕಛೇರಿಯಲ್ಲಿ ಶೈಕ್ಷಣಿಕ ಸಂಸ್ಥೆಗಳ ನೊಂದಣಿ ವಹಿಯಲ್ಲಿ ನಂ: 1 ನೊಂದಾಯಿಸಲಾಗಿದೆ. ಈ ಪ್ರಮಾಣ ಪತ್ರವನ್ನು ಕೆಳಕಂಡ ಷರತ್ತಿಗೊಳಪಟ್ಟು ನೀಡಲಾಗಿದೆ.

1. ಈ ನೊಂದಣಿ ನಿಯಮವನ್ನು 3(5)(4) ಕೆ ಒಳಪಟ್ಟಿರುತ್ತದೆ.

2. .ಗೌರನಿಂಗ್ ಕೌನ್ಸಿಂಗ್ ನಿಯಮ 4(4)ರಲ್ಲಿ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

3.ಶಾಲಾ ನಿವೇಶನ ವಿಸ್ತೀರ್ಣ ಕಟ್ಟಡ ಪಾಠ ಪಿಠೋಪಕರಣಗಳು ಸಿಬ್ಬಂದಿ ವರ್ಗ ಆರ್ಥಿಕ ಅನುಕೂಲತೆಗಳು ಮೂಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

4.ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶ ಇರುವದಿಲ್ಲಾ.

5.ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿ ಮತ್ತು ಅದೇ ಹೆಸರಿನಲ್ಲಿ ನಡೆಸತಕ್ಕದ್ದು ಮತ್ತು ಯಾವುದೇ ಕಾರಣಕ್ಕೂ ಸರಕಾರ ಪೂರ್ವಾನುಮತಿ ಇಲ್ಲದೇ ಹಸ್ತಾಂತರಪಡಿಸತಕ್ಕದಲ್ಲ.

6.ಈ ಪೂರ್ವ ಪ್ರಾಥಮಿಕ ಶಾಲಾ ನೊಂದಾವಣೆಯಂತೆ ಸರಕಾರಿ ಅಧಿಸೂಚನೆ ಸಂ:ಇಡಿ:175:ಪಿಎಂಸಿ:95 ದಿನಾಂಕ 9-7-98 ಮತ್ತು ದಿನಾಂಕ 29-12-1998 ರ ಪ್ರಕಾರ ಶಾಶ್ವತ ಅನುದಾನರಹಿತವಾಗಿರುತ್ತದೆ ಆಡಳಿತ ಮಂಡಳಿಯು ಸರಕಾರದಿಂದ ಯಾವದೇ ಅನುದಾನವನ್ನು ಬಯಸುವದಿಲ್ಲವೇಂದು ರೂ: 10/- ಛಾಪಾ ಕಾಗದದಲ್ಲಿ ನೋಟರಿಯವರ ಮುಂದೆ ಪ್ರಮಾಣಿಕರಿಸಿದ ಒಪ್ಪಿಗೆ ಪತ್ರವನ್ನು ನೀಡುವದು.

7.ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ ಶಿಸ್ತು ಮತ್ತು ನಿಯಂತ್ರಣ ನಿಯಮ 1999 ರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು ಅವುಗಳಿಗೆ ಬದ್ಧವಾಗಿರತಕ್ಕದ್ದು.

8. ಇಲಾಖಾ ಹಾಗೂ ಸರಕಾರ ನಿಗದಿಪಡಿಸಿದ ಪಠ್ಯಪುಸ್ತಕ, ಪರೀಕ್ಷಾ ಕ್ರಮ ಇತ್ಯಾದಿ ತಪ್ಪದೇ ಅಳವಡಿಸತಕ್ಕದ್ದು

9. ಸರಕಾರಿ ಆದೇಶ ಸಂ:ಇಡಿ:28:ಪಿಜಿಸಿ:98 ದಿನಾಂಕ 29-09-1994 ಪೂರ್ವ ಪ್ರಾಥಮಿಕಶಾಲೆ ಕನ್ನಡ ಅಥವಾ ಮಾತೃ ಭಾಷಾ ಮಾಧ್ಯಮದಲ್ಲಿ ನಡೆಸಿ ಭಾಷಾನೀತಿ ಪಾಲಿಸುತ್ತಿರುವ ಶಾಲೆಗಳಿಗೆ ತರಗತಿಯಿಂದ ಆಂಗ್ಲ ಮಾಧ್ಯಮಕ್ಕೆ ಮೇಲದರ್ಜೆಗೇರಿಸಿ ನೊಂದಾಯಿಸಲಾಗಿದೆ ಬಾಷಾ ನೀತಿಗೆ ಒಳಪಟ್ಟು ನೊಂದಣಿಯಾಗಿರುವ ಶಾಲೆಯಲ್ಲಿ ಭಾಷಾ ನೀತಿಯನ್ನು ಉಲ್ಲಂಘಿಸಿರುವುದು ಸರಕಾರದ/ ಇಲಾಖೆಯ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಗಮನಕ್ಕೆ ಬಂದಲ್ಲಿ ನಿಯಮಗಳನ್ವಯ ಸದರಿ ಶಾಲೆಯ ಅನುಮತಿ ಮತ್ತು ನೊಂದಣಿಯನ್ನು ರದ್ದುಪಡಿಸಲಾಗುವುದು ನೊಂದಣಿ ಪ್ರಸ್ತಾವನೆಯೊಡನೆ ಸಲ್ಲಿಸಿದ ದಾಖಲಾತಿಗಳು ಸತ್ಯಕ್ಕೆ ದೂರವಾಗಿದೆಯೆಂದು ಯಾವದೇ ಸಂದರ್ಭದಲ್ಲಿ ಕಂಡು ಬಂದಲ್ಲಿ ಈ ನೊಂದಣಿಯನ್ನು ರದ್ದುಪಡಿಸಲಾಗುವುದು.

10.ಶಾಲೆಯನ್ನು ಪ್ರಾರಂಭಸಲು ಸಂಸ್ಥೆಯವರು ಭದ್ರತಾ ಠೇವಣಿಯನ್ನು ಜಿಲ್ಲಾ ಉಪನಿರ್ದೇಶಕರು ಹಾಗೂ ಆಡಳಿತ ಮಂಡಳಿಯ ಕಾರ್ಯದರ್ಶಿಗಳ ಜಂಟಿ ಖಾತೆಯಲ್ಲಿ ಇಡತಕ್ಕದ್ದು.

11.ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ನಿಯಮಾನುಸಾರ ಪಾಲಿಸತಕ್ಕದ್ದು.

12.ತರಗತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನಿಯಮಿಸತಕ್ಕದ್ದು.

13.ಪ್ರತಿ ವರ್ಷವು ವಿದ್ಯಾರ್ಥಿಗಳ ವೈದ್ಯಕಿಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು

14.ಕರ್ನಾಟಕ ಶಿಕ್ಷಣ ಮಸೂದೆ ನಿಯಮಗಳ ಪ್ರಕಾರ ಶಾಲೆಗೆ ಬೇಕಾದ ಪೀಠೋಪಕರಣ,ಗ್ರಂಥಾಲಯ ಪುಸ್ತಕಗಳು.ಆಟದ ಮೈದಾನ ಶಾಲಾ ಕಟ್ಟಡ ಮೂಂತಾದ ಸೌಲಭ್ಯಗಳನ್ನು ಒಂದು ವರ್ಷದಲ್ಲಿ ಒದಗಿಸಿಕೊಳ್ಳತಕ್ಕದ್ದು ಇಲ್ಲದಿದ್ದಲ್ಲಿ ನೊಂದಣಿಯನ್ನು ರದ್ದುಗೊಳಿಸಲಾಗುವುದು.

15.ಶಾಲಾ ಕೆಲಸದ ವೇಳೆ ಮತ್ತು ದಿನಗಳನ್ನು ಇಲಾಖೆಯ ನಿಯಮಗಳಂತೆ ಪಾಲಿಸತಕ್ಕದ್ದು.

16. .ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೊಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭವಾದ ಎರಡು ತಿಂಗಳ ಒಳಗಾಗಿ ಈ ಕಛೇರಿಗೆ ತಿಳಿಸಬೇಕು ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ತನ್ನಿಂದ ತಾನೇ ರದ್ದಾಗುವುದು.

17. .ಸದರಿ ಶಾಲೆಗೆ ಅನುಮತಿ ನೀಡಿದ ಪೂರ್ವ ಪ್ರಾಥಮಿಕ ಶಾಲೆಯು 2013-14 ನೇ ಸಾಲಿನಿಂದ ಪ್ರಾರಂಭಿಸುವುದು.

18.ಮೂರು ತಿಂಗಳ ಒಳಗಾಗಿ 5 ಲಕ್ಷ ಬ್ಯಾಂಕಿನಲ್ಲಿರು ಬಗ್ಗೆ ಅಥವಾ ಚಿರಾಸ್ಥಿ ಹೊಂದುವದು ಇಲ್ಲವಾದಲ್ಲಿ ನೊಂದಣಿ ರದ್ದುಗೊಳಿಸಲಾಗುವುದು.

19.ಮೂರು ತಿಂಗಳ ಒಳಗಾಗಿ ಸೇವಾ ಬದ್ರತಾ ನಿಧಿ ಜಂಟಿ ಖಾತೆಯಲ್ಲಿ ಇರಿಸುವುದು ಇಲ್ಲವಾದಲ್ಲಿ ನೊಂದಣಿ ರದ್ದುಪಡಿಸಲಾಗುವುದು.

20.ನೇಮಕಾತಿ ಮಾಡಿಕೊಂಡ ಶಿಕ್ಷಕರ ಸೇವಾ ಬದ್ರತೆ ಬಗ್ಗೆ ಸೇವಾ ಪುಸ್ತಕವನ್ನು ತೆರೆಯುವುದು ಹಾಗೂ ಬ್ಯಾಂಕ ಮುಖಾಂತರ ವೇತನವನ್ನು ಬಟವಡೆ ಮಾಡುವುದು.

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಬಸವನಬಾಗೇವಾಡಿ

ಗೆ,

1) ಮುಗು ಶ್ರೀ ಬಸವೇಶ್ವರ ದೇವಾಲಯ ಪೂರ್ವ ಪ್ರಾಥಮಿಕ ಶಾಲೆ ಬಬಾಗೇವಾಡಿ ತಾ:ಬಬಾಗೇವಾಡಿ
2) ಸ್ಥಳ ಪ್ರತಿ